

ಎಂದು ಶ್ರೀನಿವಾಸ ಯೋಚನೆಗೆ ಬಿದ್ದ. ‘‘ಅದು ಮುಂದಿನ ಮಾತು. ಮೊದಲಿಗೆ, ನನ್ನ ದೇವರುಗಳು ಅಲ್ಲಿರಲು ಒಪ್ಪಬೇಕಲ್ಲ’’ ಎಂದುಕೊಂಡ.

ಶ್ರೀನಿವಾಸ ಗೋಕರ್ಣದಂಥ ಒಂದು ಊರನ್ನು– ಪುಟ್ಟ ಪಟ್ಟಣವನ್ನಿ, ಕ್ಷೇತ್ರವನ್ನಿ–ಅದುವರೆಗೂ ಕಂಡವನೇ ಅಲ್ಲ. ಯಾತ್ರಾರ್ಥಿಗಳಿಗೆ ಉಚಿತ ಊಟ ದೊರೆಯುವುದೆಂದು ತಿಳಿದಮೇಲಂತೂ ಇನ್ನಷ್ಟು ನೆಮ್ಮದಿಯೆನಿಸಿತು. ಕಂಡ, ಕಂಡ ಜಾಗಗಳಲ್ಲೆಲ್ಲ ಓಡಾಡಿದ. ಯಾವ ದೇವಮಂದಿರ ಸಿಕ್ಕರೂ ಒಳ ಹೋಗಿ ಕೈ ಮುಗಿದ. ಏಕಾಂತದಲ್ಲಿ ಪ್ರತಿ ದಿನವೂ ದೇವರಮೂರ್ತಿಗಳನ್ನು ತೆಗೆದು, ತೊಳೆದು, ಪೂಜಿಸಿ ಕೈ ಮುಗಿದು ಕೇಳುವನು:

‘‘ಈ ಜಾಗ ನಿಮಗೆ ಒಪ್ಪಿಗೆಯೇ?’’

ದೇವತೆಗಳು ಮಾತಾಡಲಿಲ್ಲ.

‘‘ಇನ್ನೂ ಎಷ್ಟಂತ, ಎಲ್ಲೀ ಅಂತ ಹೋಗಲಿ? ದಯವಿಟ್ಟು ಅಪ್ಪಣೆ ಕೊಡಿ. ನಿಮಗೆ ಈ ಜಾಗ ಒಪ್ಪಿಗೆಯೇ?’’

‘‘ಇಲ್ಲಿ ತುಂಬಾ ದೇವರಿದ್ದಾರೆ, ನಮಗೇನು ಗತಿ ಎಂದುಕೊಳ್ಳಬೇಡಿ. ನಿಮ್ಮನ್ನು ನೋಡಿಕೊಳ್ಳುವ ಭಾರ ನನಗಿರಲಿ. ಮೊದಲು ಹೂ ಅಂದುಬಿಡಿ.’’

‘‘ಹೂ ಅಲ್ಲಾ ಅಂತಾದರೆ ಉಹ್ಞೂ ಅಂತಾದರೂ ಹೇಳಿ.’’

ದೇವತೆಗಳು ಮಾತಾಡಲಿಲ್ಲ.

‘‘ನೋಡಿ, ನನಗಂತೂ ಈ ಜಾಗ ತುಂಬಾ ಒಪ್ಪಿಗೆಯಾಗಿದೆ. ಎರಡೂ ಹೊತ್ತು ದೇವರ ಪೂಜೆ ಮಾಡಿಕೊಂಡು, ಧರ್ಮಾರ್ಥವಾಗಿ ಏನಾದರೂ ಕೊಟ್ಟಿದ್ದು ಸ್ವೀಕರಿಸಿ, ಇದ್ದು ಬಿಡಬೇಕು ಎಂದುಕೊಳ್ಳುತ್ತಿದ್ದೇನೆ...’’

ದೇವತೆಗಳು ನಕ್ಕಂತನಿಸಿತು.

‘‘ನಕ್ಕುಬಿಡಿ, ಹೊಟ್ಟೆ ತುಂಬಾ ನಕ್ಕು ಬಿಡಿ. ಆದರೆ ವಿಷಯ ಏನೂ ಅಂತ ಹೇಳಿಬಿಡಿ.’’

ಶ್ರೀನಿವಾಸ ಕಣ್ಣು ಮುಚ್ಚಿ ಕೂತ. ದೇವತೆಗಳು ಒಬ್ಬರಾದ ಮೇಲೊಬ್ಬರು ಮಾತಾಡತೊಡಗಿದರು.

‘‘ಅಲ್ಲಪ್ಪಾ, ನಿನ್ನನ್ನು ಊರು ಬಿಡಿಸಿದ್ಯಾಕೆ? ನಿನ್ನೊಡನೆ ನಾವು ಹೊರಟು ಬಂದಿದ್ಯಾಕೆ?’’

‘‘ಯಾರೋ ಧರ್ಮಾರ್ಥ ಕೊಟ್ಟಿದ್ದು ತಿನ್ನುತ್ತಾ ಇಡೀ ಬಾಳುವೆ ಮಾಡಬೇಕಂತೆ! ದುಡಿಯೋ ವಯಸ್ಸಿನ ಹುಡುಗ ನೀನು, ದುಡಿಯಬೇಕು ತಾನೆ?’’

‘‘ಆದರೆ, ನನಗೆ ಯಾವ ಕೆಲಸಾನೂ ಬರೋದಿಲ್ಲ.’’

‘‘ಬರೋದಿಲ್ಲ ಅಂದರೆ ಕಲೀಬೇಕು. ನೀನು ಕಲಿಯಬೇಕು ಎಂದೇ ನಿನ್ನೊಟ್ಟಿಗೆ ಬಂದಿದ್ದೇವೆ. ಎಲ್ಲಿ ಬೇಕಾದರೂ ಕಲಿ, ಏನು ಬೇಕಾದರೂ ಕಲಿ, ಬಾಳುವೆ ಮಾಡಬೇಕಾದ ಹುಡುಗ ನೀನು. ಬಾಳುವೆ ಮಾಡು. ಬೆಳಗಿನಿಂದ ಸಂಜೆತನಕ ದುಡಿದು ಆಮೇಲೆ ಮತ್ತೆ ನಮ್ಮೊಡನೆ ಮಾತಾಡಲು ಬಾ, ಅದು ಬಿಟ್ಟು...’’ ದೇವತೆಗಳು ಒಂದು ಕ್ಷಣ ಮಾತು ನಿಲ್ಲಿಸಿದರು. ಶ್ರೀನಿವಾಸ ಕಣ್ಣು ಮುಚ್ಚಿಯೇ ಇದ್ದ.

‘‘ನಾವು ಹೇಳಿದ್ದು ಸರಿ ಅನ್ನಿಸಿದರೆ ಹಾಗೆ ನಡೆದುಕೋ. ಇಲ್ಲ, ‘‘ಕೂತು ತಿನ್ನುವವ’’ ಎಂದಾದರೆ, ಒಂದು ಕೆಲಸ ಮಾಡು – ಈ ಸಮುದ್ರದಲ್ಲಿ ನಮ್ಮನ್ನು ಎಸೆದುಬಿಡು. ಮುಂದೆ ಏನು ಬೇಕಾದರೂ ಮಾಡಿಕೊ. ನಿನ್ನ ಹಾದಿ ನಿನಗೆ. ನಮ್ಮ ಹಾದಿ ನಮಗೆ.’’

ಶ್ರೀನಿವಾಸ ಕಣ್ಣು ತೆರೆದ. ದೇವತಾಮೂರ್ತಿಗಳು ಮೂಕವಾಗಿಯೇ ಇದ್ದವು. ಕೈ ಮುಗಿದು ದೇವರಪಟಗಳನ್ನು ತುಂಬಿ ಗಂಟು ಕಟ್ಟತೊಡಗಿದ.

●